ಶ್ರೀ ಬಿ.ಎಸ್. ಯಡಿಯೂರಪ್ಪ : ಅದು ಸರಿಯಿಲ್ಲ. ರೆಕಾರ್ಡಿಗೆ ತಪ್ಪು ಹೋಗುತ್ತದೆ. ಏನು ಸ್ವಾಮಿ ಹೀಗಾದರೆ, ಸಂಬಂಧಪಟ್ಟ ಮಂತ್ರಿಗಳು ಇಲ್ಲ.

ಅಧ್ಯಕ್ಷರು : ಒಂದು ಕೆಲಸ ಮಾಡೋಣ. I will with hold this question. ಮಂತ್ರಿಗಳು ದೆಹಲಿಗೆ ಸಮಾವೇಶಕ್ಕೆ ಹೋಗಿದ್ದಾರೆ. ಅವರು ನನ್ನ ಪರ್ಮಿಷನ್ ತೆಗೆದುಕೊಂಡು ಹೋಗಿದ್ದಾರೆ. ಅವರು ಬಂದ ಮೇಲೆ we can take it up.

ಶ್ರೀ ಬಿ.ಎಸ್. ಯಡಿಯೂರಪ್ಪ : ಆಗಬಹುದು.

ಪ್ರಶ್ನೋತ್ತರ ವೇಳೆ ಮುಗಿಯಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಹಾಗೂ ಸಂಸದೀಯ, ವ್ಯವಹಾರಗಳ ಸಚಿವರು) : 8ನೇ ಸೆಪ್ಟೆಂಬರ್ 1995ರ 18ನೇ ಪಟ್ಟಿಯಲ್ಲಿ ಲಿಖಿತ ಮೂಲಕ ಉತ್ತರಿಸುವ 63ಪ್ರಶ್ನೆಗಳ ಪೈಕಿ 19ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಕಾರವಾರ - ಅಂಕೋಲ ಪಟ್ಟಣಗಳಿಗೆ ನೀರು ಪೂರೈಸುವ ಬಗ್ಗೆ

1487 - ಶ್ರೀ ವಸಂತ್ ಅಸ್ನೋಟಕರ್ (ಕಾರವಾರ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಾರವಾರ - ಅಂಕೋಲ ಪಟ್ಟಣಗಳಿಗೆ 1993-94 ಹಾಗೂ 1994-95 ಮತ್ತು 1995 ಜುಲೈ ಅಂತ್ಯದವರೆಗೆ ರಾಜ್ಯ ನಗರ ನೀರು ಸರಬರಾಜು ಮಂಡಲಿ ನೀರು ಸರಬರಾಜು ಮಂಡಲಿ ನೀರು ಪೂರೈಸಿದ ದಿನಗಳೆಷ್ಟು ಹಾಗೂ ನೀರಿನ ಪ್ರಮಾಣವೆಷ್ಟು?

ಆ) ಈ ಎರಡು ಪಟ್ಟಣಗಳಿಗೆ ಸಾಕಷ್ಟು ನೀರು ಪೂರೈಸಲು ತೊಂದರೆ ಏನು?

ಇ) ತೀರಾ ದುಸ್ಥಿತಿಯಲ್ಲಿರುವ ಪೈಪ್‌ಲೈನ್ ಬದಲಾವಣೆ ಮಾಡಲು ಸರ್ಕಾರದವರು ಕ್ರಮಕೈಗೊಳ್ಳುವರೆ?

ಈ) ನೀರೆತ್ತುವ ಕೇಂದ್ರದಲ್ಲಿ ಸಂಭವಿಸುವ ವಿದ್ಯುತ್ ವ್ಯತ್ಯಯಕ್ಕೆ ಬದಲಿ ವ್ಯವಸ್ಥೆ ಕೈಗೊಳ್ಳಲಾಗಿದೆಯೇ?

ಉ) ನಗರದ ಹೊಸ ಬಡಾವಣೆಗಳಿಗೆ ನೀರು ಪೂರೈಕೆ ಯೋಜನೆಯನ್ನು ಮಾಡಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ) ಮಂಡಲಿಯು ಕಾರವಾರ ಮತ್ತು ಅಂಕೋಲ ಪಟ್ಟಣಗಳಿಗೆ ಪೂರೈಸಿರುವ ನೀರಿನ ಪ್ರಮಾಣ.

ಕಾರವಾರ :

ವರ್ಷ	ನೀರು ಪೂರೈಸಿದ ದಿನಗಳು	ನೀರಿನ ಪ್ರಮಾಣ ದರ ದಶಲಕ್ಷ ಲೀಟರ್‌ಗಳು
1993-94	341	593.50
1994-95	322	415.60

1995 ಜುಲೈವರೆಗೆ	106	139.00
ಅಂಕೋಲ		
1993-94	341	399.00
1994-95	322	295.62
1995 ಜುಲೈ ಅಂತ್ಯದವರೆಗೆ	166	88.40

ಅ) ಹಾಲಿ ಇರುವ ನೀರು ಸರಬರಾಜು ವ್ಯವಸ್ಥೆಯು 20 ವರ್ಷಗಳಷ್ಟು ಹಳೆಯದಾಗಿದ್ದು ಯಂತ್ರೋಪಕರಣಗಳ ಸವೆತದಿಂದಾಗಿ ಕಾರ್ಯ ಕ್ಷಮತೆಯಲ್ಲಿ ಕ್ಷೀಣತೆ ಉಂಟಾಗಿರುತ್ತದೆ. ಹಾಗೂ ಪೈಪ್‌ಲೈನ್ ಜಾಯಿಂಟ್‌ಗಳು ದುರ್ಬಲಗೊಂಡಿರುತ್ತದೆ. ಹಾಗೂ ವಿದ್ಯುಚ್ಛಕ್ತಿಯ ಆಡಚಣೆ ಮತ್ತು ನೀರಿನ ಬೇಡಿಕೆಯಲ್ಲಿ ಗಮನಾರ್ಹ ಏರಿಕೆ ಉಂಟಾಗಿರುತ್ತದೆ. ಈ ಮೇಲ್ಕಂಡ ಕಾರಣಗಳಿಂದಾಗಿ ಈ ಎರಡು ಪಟ್ಟಣಗಳಿಗೆ ಸಾಕಷ್ಟು ನೀರು ಪೂರೈಸಲು ಸಾಧ್ಯವಾಗಿರುವುದಿಲ್ಲ.

ಆ) 20 ವರ್ಷ ಹಳೆಯದಾದ ಪೈಪ್‌ಲೈನ್‌ನ ಜಾಯಿಂಟ್‌ಗಳು ದುರ್ಬಲಗೊಂಡಿದ್ದು ಆಗಾಗ ಅವುಗಳಲ್ಲಿ ಸೋರಿಕೆ ಉಂಟಾಗುತ್ತಿರುತ್ತದೆ. ಈ ಜಾಯಿಂಟ್‌ಗಳನ್ನು ಬಲಪಡಿಸಲು ಅಂದಾಜು ಪಟ್ಟಿಯನ್ನು ತಯಾರಿಸಲಾಗುತ್ತಿದೆ.

ಈ) ಇಲ್ಲ

ಉ) ನಗರದ ಹೊಸ ಬಡಾವಣೆಗಳಿಗೆ ನೀರು ಪೂರೈಕೆ ಮಾಡಲು, ನಗರದ ನೀರು ಸರಬರಾಜು ವ್ಯವಸ್ಥೆಯ ಅಭಿವೃದ್ಧಿಗಾಗಿ, ಒಂದು ಯೋಜನೆಯನ್ನು ಸಿದ್ಧ ಪಡಿಸಲಾಗುತ್ತಿದೆ.

ಹುಬ್ಬಳ್ಳಿ - ಧಾರವಾಡ ನಗರಕ್ಕೆ ನೀರು ಪೂರೈಕೆ

1533ಎ - ಶ್ರೀ ಅಶೋಕ್ ಕಾಟ್‌ವೆ (ಹುಬ್ಬಳ್ಳಿ ನಗರ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹುಬ್ಬಳ್ಳಿ - ಧಾರವಾಡ ಅವಳಿ ನಗರಗಳಲ್ಲಿ ನೀರು ಪೂರೈಕೆಯ ಕಾರ್ಯ ನೆನೆಗುದಿಗೆ ಬಿದ್ದು, ಜನಸಾಮಾನ್ಯರು ಬವಣೆ ಪಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಈ ಬಗ್ಗೆ ಸರ್ಕಾರವು ತೆಗೆದುಕೊಂಡ ಕ್ರಮಗಳೇನು?

ಆ) ಅಂಥ ಕಾರ್ಯಕ್ರಮ ಜಾರಿಗೆ ತಂದಿದ್ದಾರೆ. ಅದರ ವಸ್ತು ಸ್ಥಿತಿ ಯಾವ ಹಂತದಲ್ಲಿದೆ?

ಇ) ಇದಕ್ಕಾಗಿ ಸರ್ಕಾರ ಬಿಡುಗಡೆ ಮಾಡಿದ ಹಣವೆಷ್ಟು?

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ) ಹೌದು, ಇದನ್ನು ಪರಹರಿಸಲು ರೂ. 700.00 ಲಕ್ಷಗಳ ಅಂದಾಜಿನಲ್ಲಿ ಜಲಸಂಗ್ರಹಾಗಾರಗಳ ನಿರ್ಮಾಣ ಮತ್ತು ವಿತರಣಾ ಜಾಲ ನವೀಕರಣ ಯೋಜನೆಯ ಕಾರ್ಯವನ್ನು ಕೈಗೊಳ್ಳಲಾಗಿದೆ.

ಆ) ಮೇಲ್ಕಂಡ ಯೋಜನೆಯ ಕಾಮಗಾರಿಗಳ ಪೈಕಿ ಶೇ. 90ರಷ್ಟು ಕೆಲಸ ಮುಗಿಸಲಾಗಿದೆ. ಉಳಿದ ಕೆಲಸಗಳು ಮಾರ್ಚಿ 96ಕ್ಕೆ ಮುಗಿಯುವ ನಿರೀಕ್ಷೆ ಇದೆ.

ಇ) ಪುರಸಭೆಯವರಿಂದ 30 ಲಕ್ಷ ಒಳಗೊಂಡಂತೆ ಸರ್ಕಾರದಿಂದ ಖರ್ಚು628.63 ಲಕ್ಷ